ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ ಜಿಲ್ಲೆ ರವರ ಪತ್ರವನ್ನು ಕಡತದಲ್ಲಿ ದಯವಿಟ್ಟು ಅವಗಾಹಿಸುವುದು.

2) ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ನಿಯಮ ಬಾಹಿರವಾಗಿ ಗ್ರಾಮ ಪಂಚಾಯಿತಿನ ಚೆಕ್‌ನ್ನು ಸ್ವಂತಕ್ಕೆ ಪಡೆದಿರುವುದಾಗಿ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ ರವರು ದಿನಾಂಕ: 05–07–2017 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ ನಿರ್ದೇಶಕರು ಪಂ.ರಾಜ್–1 ರವರ ಅನುಮೋದನೆಯೊಂದಿಗೆ ಕಾರಣ ಕೇಳುವ ನೋಟೀಸ್ ನೀಡಬಹುದಾಗಿದೆ. ಅದರಂತೆ ಕರಡು ಕಾರಣ ಕೇಳುವ ನೋಟೀಸ್‌ನ್ನು ಅನುಮೋದನೆಗಾಗಿ ಮಂಡಿಸಿದೆ.

ಕಾರಣ ಕೇಳಿ ನೋಟೀಸನ್ನು ಜಾರಿಗೊಳಿಸಲು ಒಪ್ಪಿದೆ.

ನಿರ್ದೇಶಕರು (ಪಂ.ರಾಜ್–1)

06) ಅಧೀನ ಕಾರ್ಯದರ್ಶಿ)

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

8) [illegible]

5/8/17

9) [illegible]

4) [illegible]

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

— ಗ್ರಾಅಪ/764/ಗ್ರಾಪಂಅ/2017

12) ದಿನಾಂಕ: 22.08.2017 ರಂದು ಶ್ರೀ ಚಿಕ್ಕೇಗೌಡ ಬಿನ್ ಕಾಶಿಗೌಡ ಉಪಾಧ್ಯಕ್ಷರು, ಬೇಬಿ ಗ್ರಾಮ ಪಂಚಾಯತಿ, ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಹಾಗೂ ದಿನಾಂಕ: 26.08.2017 ರಂದು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಪಂಚಾಯತಿ, ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ದಯವಿಟ್ಟು ಅವಗಾಹಿಸುವುದು.

13) ಶ್ರೀ ಚಿಕ್ಕೇಗೌಡ, ಉಪಾಧ್ಯಕ್ಷರು, ಬೇಬಿ ಗ್ರಾಮ ಪಂಚಾಯತಿ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

- ನಾನು ಕೃಷಿಕನಾಗಿದ್ದು, ಗುತ್ತಿಗೆದಾರನಾಗಲಿ, ವ್ಯಾಪಾರಿಯಾಗಲಿ ಅಲ್ಲ ನನ್ನ ಬ್ಯಾಂಕ್ ಖಾತೆಗೆ ಜಮೆಯಾದ ಹಣ ಕೈತಪ್ಪಿನಿಂದಾಗಿದ್ದು, ಸದರಿ ಹಣವನ್ನು ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಯವರು ಲಿಖಿತವಾಗಿ ಬರೆದುಕೊಟ್ಟು ನನ್ನಿಂದ ಹಣ ಪಡೆದು ಸಂಬಂಧಿಸಿದವರಿಗೆ ನೀಡಿರುತ್ತಾರೆ. ನನ್ನ ಮೇಲಿನ ಆರೋಪ ಕೇವಲ ರಾಜಕೀಯ ದುರುದ್ದೇಶಪೂರಿತವಾಗಿದ್ದು ಅಧಿಕಾರಿಗಳ ವರದಿಯಲ್ಲಿ ಸತ್ಯಾಂಶವೇ ಇರುವುದಿಲ್ಲವೆಂದು ಹಾಗೂ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರು ಬರೆದು ಕೊಟ್ಟಿರುವ ಪತ್ರದ ನಕಲನ್ನು ಲಗತ್ತಿಸಿರುತ್ತೇನೆಂದು ತಿಳಿಸಿರುತ್ತಾರೆ.

14) ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಪಂಚಾಯತಿ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

- ನೋಟೀಸ್‌ನಲ್ಲಿ ತಿಳಿಸಿದಂತೆ ನಾನು ನಿಯಮಬಾಹಿರವಾಗಿ ಸ್ವಂತಕ್ಕೆ ಚೆಕ್‌ನ್ನು ಪಡೆದುಕೊಂಡಿರುವುದಿಲ್ಲ 2015-16 ನೇ ಸಾಲಿನ ಹನಗನಹಳ್ಳಿ ಗ್ರಾಮ ದೇವತೆ ಹಬ್ಬದ ದಿನ ಕುಡಿಯುವ ನೀರಿನ ಸ್ಥಾವರಗಳು ಸುಟ್ಟು ಹೋದ ಕಾರಣ ಸಾರ್ವಜನಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಾಗಿತ್ತು ಅದಕ್ಕೆ ಪಿಡಿಓ ರವರನ್ನುಕೋರಿಕೊಳ್ಳಲಾಗಿ ಅವರು ತಮ್ಮ ವತಿಯಿಂದ ಕೂಡಲೇ ಕ್ರಮ ಕೈಗೊಳ್ಳಲು ಮತ್ತು ಹಣ ಖರ್ಚು ಮಾಡಲು ಅವಕಾಶ ಇಲ್ಲದ ಕಾರಣ ನನಗೆ ಪರ್ಯಾಯ ವ್ಯವಸ್ಥೆಯನ್ನು ನಾನೇ ಹಣ ಖರ್ಚು ಮಾಡಿ ಕಾರ್ಯಗತ ಮಾಡಿಕೊಳ್ಳಬೇಕೆಂದು ಮತ್ತು ನಂತರದಲ್ಲಿ ನನ್ನಿಂದ ಖರ್ಚಾಗುವ ಹಣಕ್ಕೆ ಪಂಚಾಯತಿ ವತಿಯಿಂದ ಚೆಕ್ ನೀಡುವುದಾಗಿ ತಿಳಿಸಿದರು. ಅದರಂತೆ ಪಂ.ಅ.ಅ ರವರು ನಾನು ಖರ್ಚು ಮಾಡಿದ್ದು 16400-00 ರೂ ಗಳನ್ನು ನನ್ನ ಹೆಸರಿಗೆ ಚೆಕ್‌ನ್ನು ಕೊಟ್ಟಿರುತ್ತಾರೆ. ಗ್ರಾಮದಲ್ಲಿ ತುರ್ತು ಪರಸ್ಥಿತಿ ಇದ್ದುದರಿಂದ ಪಂಚಾಯತಿ ಪರವಾಗಿ ಖರ್ಚು ಮಾಡಿದ್ದರಿಂದ ಆ ಹಣಕ್ಕೆ ಪಂ.ಅ.ಅ ಯವರು ಸದ್ಭಾವನೆಯಿಂದ ಚೆಕ್ ನೀಡಿರುತ್ತಾರೆ ವಿನಃ ಅನ್ಯಥಾ ಅಲ್ಲ ಒಂದು ವೇಳೆ ಅಂತಹ ತುರ್ತು ಸಂದರ್ಭದಲ್ಲೂ ಸಹ ಸದಸ್ಯರು ಕ್ರಮ ಕೈಗೊಳ್ಳುವುದು ಸರಿಯಲ್ಲವೆಂದು ತಾವು ಭಾವಿಸಿದರೆ ಇಂತಹ ಕ್ರಮಗಳನ್ನು ಮುಂದೆ ನಾನು ಎಂದೂ ಸಹ ಕೈಗೊಳ್ಳುವುದಿಲ್ಲವೆಂದು ಆದ್ದರಿಂದ ನನ್ನ ವಿರುದ್ಧ ಕ್ರಮ ಜರುಗಿಸುವುದನ್ನು ಕೈಬಿಟ್ಟು, ಸದುದ್ದೇಶದಿಂದ ಆಗಿರುವ ಈ ಒಂದು ಕ್ರಮವನ್ನು ಮನ್ನಿಸಬೇಕಾಗಿ ತಿಳಿಸಿರುತ್ತಾರೆ.

15) ಸದರಿ ಪ್ರಕರಣದಲ್ಲಿ ವಿಚಾರಣೆಗಾಗಿ ಸಮಯ ಮತ್ತು ದಿನಾಂಕ ನಿಗದಿಪಡಿಸಬಹುದಾಗಿದೆ. ಮುಂದಿನ ಆದೇಶಕ್ಕಾಗಿ ಕಡತ ಮಂಡಿಸಿದೆ.

25/9/17

(15)

25/9

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

1316 ದಿನಾಂಕ 6/10/17

18) ನಿರ್ದೇಶಕರು

ದಿನಾಂಕ ಮತ್ತು ಸಮಯವನ್ನು ಕೋರಿದೆ.

ನಿರ್ದೇಶಕರು (ಪಂ.ರಾಜ್-1)

19) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ದಿನಾಂಕ: 28.12.2017 ರಂದು ಅಪರಾಹ್ನ 3.00ಕ್ಕೆ ವಿಚಾರಣೆಯನ್ನು ನಿಗದಿಪಡಿಸುವಂತೆ ಮಾನ್ಯ ಪ್ರ.ಕಾ. ರವರು ಸೂಚಿಸಿರುತ್ತಾರೆ.

29/11/17

20) Dir P.R-I

30/11

21)

30/11

22) 30/11

23) ದಿ: 28-12-2017 ರಂದು ವಿಚಾರಣೆ ನಿಗದಿ ಪಡಿಸಲಾಗಿದ್ದು ಅದರಂತೆ ವಿಚಾರಣಾ ತಿಳುವಳಿಕೆ ಪತ್ರ ಸಿದ್ಧಗಾಗಿ ಸಲ್ಲಿಸಿದೆ

04/12/2017

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

24)

25)

26) ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಬೇಬಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ರವರು ಗ್ರಾಮ ಪಂಚಾಯತಿಯಲ್ಲಿ ಹಣಕಾಸು ಅವ್ಯವಹಾರ ನಡೆಸಿರುತ್ತಾರೆಂದು ಶ್ರೀ ಕೃಷ್ಣೇಗೌಡ ಬಿನ್ ಚಿಕ್ಕೇಗೌಡ, ಬಿದರಕಟ್ಟೆ ಗ್ರಾಮ ಬಸರಾಳು ಹೋಬಳಿ ಇವರು ದೂರು ಸಲ್ಲಿಸಿದ ಮೇರೆಗೆ ಸಹಾಯಕ ಯೋಜನಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತ್ ಮಂಡ್ಯ ಇವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ವರದಿಯಲ್ಲಿ ಶ್ರೀ ಭೈರವೇಶ್ವರ ಎಲಕ್ಟ್ರಿಕಲ್ಸ್ ಇವರಿಂದ ಖರೀದಿಸಿದ ಸಾಮಾಗ್ರಿಗಳ ಬಾಬ್ತಿನ ಚೆಕ್ಕನ್ನು ಸಂಸ್ಥೆಯ ಹೆಸರಿಗೆ ಬದಲಾಗಿ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ಸದಸ್ಯರು ಇವರ ಹೆಸರಿಗೆ ಗ್ರಾಮ ಪಂಚಾಯತಿಯಿಂದ ನಿಯಮಬಾಹಿರವಾಗಿ ಪಿ.ಡಿ.ಓ ರವರು ವಿತರಿಸಿರುತ್ತಾರೆಂದು ತಿಳಿಸಿರುತ್ತಾರೆ. ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡರವರ ಹೆಸರಿಗೆ ವಿತರಿಸಿರುವ ಚೆಕ್ ನಂ.81526 ರೂ.24,000 ಚೆಕ್ ನಂ.81528 ರೂ.26,190/ ಗಳು ಕೆನರಾ ಬ್ಯಾಂಕ್ ಬಸರಾಳು ಶಾಖೆಯಿಂದ ಶ್ರೀ ಚಿಕ್ಕೇಗೌಡರವರ ಖಾತೆ ಸಂಖ್ಯೆ 1297101014911 ಮತ್ತು ಕಾವೇರಿ ಗ್ರಾಮೀಣ ಬ್ಯಾಂಕ್ ಖಾತೆ ಚೆಕ್ ನಂ.469848 ದಿನಾಮಖ:18-05-2016 ರಂದು ರೂ.20,660 ಜಮೆಯಾಗಿರುತ್ತದೆ. ಸದಸ್ಯರಾದ ಶ್ರೀ ಮರಿಬೋರೇಗೌಡ ರವರ ಹೆಸರಿಗೆ ವಿತರಿಸಿರುವ ಚೆಕ್ ನಂ 81525 ರೂ.16400/- ಆಕ್ಸಿಸ್ ಬ್ಯಾಂಕ್ ನಲ್ಲಿ ನಗಧೀಕರಣವಾಗಿರುತ್ತದೆ. ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ಇವರುಗಳು 12(ಹೆಚ್)ರಂತೆ ನಿಯಮಬಾಹಿರವಾಗಿ ಗ್ರಾಮ ಪಂಚಾಯತ್ ಚೆಕ್ಕನ್ನು ಸ್ವಂತಕ್ಕೆ ಪಡೆದಿರುವುದರಿಂದ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43-ಎ ಅನ್ವಯ ಕ್ರಮ ಜರುಗಿಸಲು ಮುಖ್ಯ ಕಾರ್ಯನಿವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಡ್ಯ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

27) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರನ್ವಯ ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಆಪಾದಿತರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

28) ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸರ್ಕಾರದಿಂದ ನಿಡಲಾದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ನಾನು ಕೃಷಿಕನಾಗಿದ್ದು, ಗುತ್ತಿಗೆದಾರನಾಗಲಿ, ವ್ಯಾಪಾರಿಯಾಗಲಿ ಅಲ್ಲ ನನ್ನ ಬ್ಯಾಂಕ್ ಖಾತೆಗೆ ಜಮೆಯಾದ ಹಣ ಕೈತಪ್ಪಿನಿಂದಾಗಿದ್ದು, ಸದರಿ ಕಹಣವನ್ನು ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಯವರು ಲಿಖಿತವಾಗಿ ಬರೆದುಕೊಟ್ಟು, ನನ್ನಿಂದ ಹಣ ಪಡೆದು ಸಂಬಂಧಿಸಿದವರಿಗೆ ನೀಡಿರುತ್ತಾರೆ. ನನ್ನ ಮೇಲಿನ ಆರೋಪ ಕೇವಲ ರಾಜಕೀಯ ದುರುದ್ದೇಶಪೂರಿತ ವಾಗಿದ್ದು ಅಧಿಕಾರಿಗಳ ವರದಿಯಲ್ಲಿ ಸತ್ಯಾಂಶವೇ

ಇರುವುದಿಲ್ಲವೆಂದು ಹಾಗೂ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರು ಬರೆದು ಕೊಟ್ಟಿರುವ ಪತ್ರದ ನಕಲನ್ನು ಲಗತ್ತಿಸಿರುತ್ತೇನೆಂದು" ತಿಳಿಸಿರುತ್ತಾರೆ.

29) ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

"ನೋಟೀಸ್‌ನಲ್ಲಿ ತಿಳಿಸಿದಂತೆ ನಾನು ನಿಯಮಬಾಹಿರವಾಗಿ ಸ್ವಂತಕ್ಕೆ ಚೆಕ್‌ನ್ನು ಪಡೆದುಕೊಂಡಿರುವುದಿಲ್ಲ 2015-16 ನೇ ಸಾಲಿನ ಹನಿಗನಹಳ್ಳಿ ಮತ್ತು ದೇವತೆ ಹಬ್ಬದ ದಿನ ಕುಡಿಯುವ ನೀರಿನ ಸ್ಥಾವರಗಳು ಸುಟ್ಟು ಹೋದ ಕಾರಣ ಸಾರ್ವಜನಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಾಗಿತ್ತು ಅದಕ್ಕೆ ಪಿಡಿಓ ರವರನ್ನುಕೋರಿಕೊಳ್ಳಲಾಗಿ ಅವರು ತಮ್ಮ ವತಿಯಿಂದ ಕೂಡಲೇ ಕ್ರಮ ಕೈಗೊಳ್ಳಲು ಮತ್ತು ಹಣ ಖರ್ಚು ಮಾಡಲು ಅವಕಾಶ ಇಲ್ಲದ ಕಾರಣ ನನಗೆ ಪರ್ಯಾಯ ವ್ಯವಸ್ಥೆಯನ್ನು ನಾನೇ ಹಣ ಖರ್ಚು ಮಾಡಿ ಕಾರ್ಯಗತ ಮಾಡಿಕೊಳ್ಳಬೇಕೆಂದು ಮತ್ತು ನಂತರದಲ್ಲಿ ನನ್ನಿಂದ ಖರ್ಚಾಗುವ ಹಣಕ್ಕೆ ಪಂಚಾಯತಿ ವತಿಯಿಂದ ಚೆಕ್ ನೀಡುವುದಾಗಿ ತಿಳಿಸಿದರು. ಅದರಂತೆ ಪಂ.ಅ.ಅ ರವರು ನಾನು ಖರ್ಚು ಮಾಡಿದ್ದು 16400-00 ರೂ ಗಳನ್ನು ನನ್ನ ಹೆಸರಿಗೆ ಚೆಕ್‌ನ್ನು ಕೊಟ್ಟಿರುತ್ತಾರೆ. ಗ್ರಾಮದಲ್ಲಿ ತುರ್ತು ಪರಿಸ್ಥಿತಿ ಇದ್ದುದರಿಂದ ಪಂಚಾಯತಿ ಪರವಾಗಿ ಖರ್ಚು ಮಾಡಿದ್ದರಿಂದ ಆ ಹಣಕ್ಕೆ ಪಂ.ಅ.ಅ ಯವರು ಸದ್ಭಾವನೆಯಿಂದ ಚೆಕ್ ನೀಡಿರುತ್ತಾರೆ ವಿನ: ಅನ್ಯಥಾ ಅಲ್ಲ ಒಂದು ವೇಳೆ ಅಂತಹ ತುರ್ತು ಸಂದರ್ಭದಲ್ಲೂ ಸಹ ಸದಸ್ಯರು ಕ್ರಮ ಕೈಗೊಳ್ಳುವುದು ಸರಿಯಲ್ಲವೆಂದು ತಾವು ಭಾವಿಸಿದರೆ ಇಂತಹ ಕ್ರಮಗಳನ್ನು ಮುಂದೆ ನಾನು ಎಂದೂ ಸಹ ಕೈಗೊಳ್ಳುವುದಿಲ್ಲವೆಂದು ಆದ್ದರಿಂದ ನನ್ನ ವಿರುದ್ಧ ಕ್ರಮ ಜರುಗಿಸುವುದನ್ನು ಕೈಬಿಟ್ಟು, ಸದುದ್ದೇಶದಿಂದ ಆಗಿರುವ ಈ ಒಂದು ಕ್ರಮವನ್ನು ಮನ್ನಿಸಬೇಕಾಗಿ" ತಿಳಿಸಿರುತ್ತಾರೆ.

30) ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 28.12.2017 ರಂದು ಜರುಗಿದ್ದ ವಿಚಾರಣೆಯಲ್ಲಿ, ಆಪಾದಿತ ಉಪಾಧ್ಯಕ್ಷರು ಮತ್ತು ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಸಹಾಯಕ ಕಾರ್ಯದರ್ಶಿ-2 ಜಿಲ್ಲಾ ಪಂಚಾಯತಿ ಮಂಡ್ಯ, ತಾಲ್ಲೂಕು ಯೋಜನಾಧಿಕಾರಿ, ತಾಲ್ಲೂಕು ಪಂಚಾಯತಿ, ಮಂಡ್ಯ ಹಾಗೂ ಪಂಚಾಯತಿ ಅಭಿವೃದ್ಧಿ ಆದಿಕಾರಿ, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಹಾಜರಿದ್ದರು. ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಇವರುಗಳು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

31) ಸರ್ಕಾರವು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ ರವರ ಪ್ರಸ್ತಾವನೆಗಳು, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಆಪಾದಿತ ಸದಸ್ಯರ ಹೇಳಿಕೆಗಳನ್ನು ಪರಿಶೀಲಿಸಿ, ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ತುರ್ತು ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಮಾಡಿರುವ ಖರ್ಚನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನೇರವಾಗಿ ಶ್ರೀ ಮರಿಬೋರೇಗೌಡ ರವರಿಗೆ ಚೆಕ್ ನೀಡಿದ್ದು ಕಂಡುಬಂದಿದ್ದು, ಹಾಗೂ ಕುಡಿಯುವ ನೀರಿನ ಸ್ಥಾವರಗಳ ದುರಸ್ಥಿ ಮಾಡಿದ ಬಾಬ್ತು ಚೆಕ್ ನಂ.81526 ರೂ.24,000/-ಮತ್ತು ಚೆಕ್ ನಂ.81528 ರೂ.26,190/-ಗಳನ್ನು ದುರಸ್ಥಿಗಾರರಾದ ಶ್ರೀ ಚಿಕ್ಕೇಗೌಡರಿಗೆ ನೀಡಿದ ಚೆಕ್ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಇವರ ಬ್ಯಾಂಕ್ ಖಾತೆಗೆ

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

ಕೈತಪ್ಪಿನಿಂದಾಗಿ ಜಮೆಯಾಗಿದ್ದು, ಸದರಿ ಚೆಕ್ ಮೊತ್ತವನ್ನು ದುರಸ್ಥಿಗಾರರಾದ ಶ್ರೀ ಚಿಕ್ಕೇಗೌಡರವರಿಗೆ ಹಿಂದಿರುಗಿಸಿರುವುದಾಗಿ ಹೇಳಿಕೆ ನೀಡಿರುವ ಇರುವ ಹಿನ್ನಲೆಯಲ್ಲಿ ಎಚ್ಚರಿಕೆ ನೀಡಿ ಶ್ರೀ ಚಿಕ್ಕೇಗೌಡ ಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರು ಆದೇಶಿಸಿರುತ್ತಾರೆ. ಅದರಂತೆ ಕರಡು ಆದೇಶ ಮಾನ್ಯ ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ರವರ ಅನುಮೋದನೆಗಾಗಿ ಸಲ್ಲಿಸಿದೆ.

16-1-2018

32)

16/1

33)

ಟಿಪ್ಪಣಿ 31 'ಅ' ರ ಪ್ರಸ್ತಾವನೆಗೆ ಮಾನ್ಯ ಗ್ರಾ.ಅ.ಪಂ.ರಾ ಸಚಿವರ ಅನುಮೋದನೆ ಕೋರಲಾಗಿದೆ

18/1/18

34) ವಿಷಯ ನಿರ್ವಾಹಕ ಪಂ.ರಾಜ್-1

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ, ಸದಸ್ಯರು, ಬೇಬಿ ಗ್ರಾಮ ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ದುರ್ನಡತೆ ಬಗ್ಗೆ.

ಗ್ರಾಅಪ/764/ಗ್ರಾಪಂಅ/2017

---

ಸದರಿ ಪ್ರಕರಣವು ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ನ್ಯಾಯಲಯದಲ್ಲಿ ದಿನಾಂಕ: **28.12.2017** ಮತ್ತು **12.01.2018** ರಂದು ವಿಚಾರಣೆ ನಡೆದಿದ್ದು, ಆದೇಶದ ದಿನಾಂಕ: **12.01.2018** ರಂತೆ ಆಪಾದಿತರ ಮೇಲಿನ ಆರೋಪವು ಸಾಬೀತಾಗಿಲ್ಲದಿರುವುದರಿಂದ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿದ್ದು, ಆದೇಶ ಜಾರಿಗೊಳಿಸಲು ಮಾನ್ಯ ಗ್ರಾಅ ಮತ್ತು ಪಂ.ರಾಜ್ ಸಚಿವರ ಅನುಮೋದನೆ ಪಡೆಯಬಹುದಾಗಿದೆ.

ನಿರ್ದೇಶಕರು(ಪಂ.ರಾಜ್–1)

35) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ಡಾ: ಎಸ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಮೋದಿಸಿದೆ.

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು